

ರಚನೆ ಮತ್ತು ಅದರ ಭಾಷಾರೂಪ ಚಳವಳಿ ನಡೆದದ್ದನ್ನೂ ನೆನೆಯಬೇಕಾಗಿದೆ. ಕನ್ನಡ ಪರಂಪರೆಯ ಸಾಮಾನ್ಯ–ಅಸಾಮಾನ್ಯ, ಪಂಡಿತ–ಪಾಮರ ಮತ್ತು ಪ್ರಖರ ವೈಚಾರಿಕ ಧೋರಣೆಯ ನಡೆಯೇ ವೈವಿಧ್ಯಮಯ.

ಯಥಾವಿಧಿಯಾಗಿ ವಿದ್ವಾಂಸರ ನಡುವೆ ಕವಿಯ ಕಾಲವನ್ನು ಕುರಿತಾಗಿ ವಿಪುಲ ಚರ್ಚೆ ನಡೆದು ಆತನ ಜೀವಿತ ಸಂದರ್ಭವನ್ನು ಡಿ.ಎಲ್. ನರಸಿಂಹಾಚಾರ್, ದ.ರಾ. ಬೇಂದ್ರೆ, ವಿಂಟರ್ನಿಟ್ಸ್ ಅವರು 1600 ಎಂದಿರುತ್ತಾರೆ. ಇದರೊಂದಿಗೆ ಲಕ್ಷ್ಮೀಶನು ತನ್ನ ಹುಟ್ಟಿನ ನೆಲೆಯನ್ನು ದೇವನೂರು ಎಂದಿರುವುದರಿಂದ ಈ ದೇವಪುರ ಕಡೂರಿನ ಬಳಿಯದಲ್ಲ, ಅದು ಸುರಪುರ ತಾಲ್ಲೂಕಿನ ದೇವಪುರ ಎಂದು ವಿದ್ವಾಂಸರು ವಾದಿಸಿರುತ್ತಾರೆ. ಅದಕ್ಕೆ ಕಾರಣ ಸುರಪುರದಲ್ಲಿಯೂ ಲಕ್ಷ್ಮೀಕಾಂತನ ದೇವಾಲಯವಿದೆ. ಆದರೆ ಕಡೂರಿನ ಬಳಿಯ ದೇವನೂರಿನ ಹಿರಿಯ ತಲೆಮಾರಿನ ಜನ ಹೇಳುವುದೆಂದರೆ ಕವಿಯು ಲಕ್ಷ್ಮೀರಮಣನ ಅನನ್ಯ ಭಕ್ತನಾಗಿದ್ದು ಅವನು ಬದುಕಿದ್ದ ಕಾಲಕ್ಕೆ ಊರೆಲ್ಲ ಚಂದಾ ಹಣ ಎತ್ತಿ ದೇವಾಲಯದ ಜೀರ್ಣೋದ್ಧಾರ ಮಾಡಿಸಿದನಂತೆ. ಅಲ್ಲದೆ ದೇವಾಲಯದ ಮುಂಭಾಗದ ಬೀದಿಯಲ್ಲಿ ಕಳೆದ ಶತಮಾನದಲ್ಲಿ ಅವನ ಮತ ಸಂಬಂಧಿ ಜನ ಇದ್ದು, ಅವರು ವೈವಾಹಿಕ ಸಂದರ್ಭದಲ್ಲಿ ಕವಿಗೆ ಅಗ್ರ ತಾಂಬೂಲವೆತ್ತಿ ಗುಡಿಗೆ ಕಳಿಸುವ ಪರಿಪಾಠವಿಟ್ಟುಕೊಂಡಿದ್ದರಂತೆ. ಈಗಲೂ ಗುಡಿಯಲ್ಲಿ ಕವಿಕಾವ್ಯ ಮಂಟಪ ಇದ್ದು ಅಲ್ಲಿ ಕವಿಯ ವಿಗ್ರಹವು ವಿರಾಜಮಾನವಾಗಿದೆ.

★★★

ಕುಮಾರವ್ಯಾಸ ಮತ್ತು ಲಕ್ಷ್ಮೀಶ ಇಬ್ಬರೂ ಭಾಗವತ ಪರಂಪರೆಯ ಕವಿಗಳಾದರೂ ಮಹಾಭಾರತ ರಚನೆಗೆ ಕೈ ಹಾಕಿದ ಇವರ ಕೃತಿ ರಚನಾಕ್ರಮದಲ್ಲಿ ಬಹಳ ವ್ಯತ್ಯಾಸವಿದೆ. ಕುಮಾರವ್ಯಾಸ ಬಳಸಿದ ಜನಪದ ಭಾಷಾಶೈಲಿ ಲಕ್ಷ್ಮೀಶನದಲ್ಲ. ನಾರಣಪ್ಪನಂತೆ 'ತೊತ್ತಿನ ಸವಡಿ ವೇಟದ', 'ಹಳ್ಳಿಕಾತಿಯರೊಳಗುಡಿಯ ಹಾದರ', 'ನಾವೆಡೆಮುರಿದವರು', 'ಬಿಟ್ಟವರು ನಿನ್ನಯ ಸೂಳುಪಾಳೆಯವ', 'ಗಂಡರೋ ನೀವು ಭಂಡರೋ', 'ತೋಳಹೊರೆ ನಿಮಗೇಕೆ' ಈ ಬಗೆಯ ಗ್ರಾಮ್ಯ ಪದಗಳನ್ನು ಲಕ್ಷ್ಮೀಶ ಬಳಸಲಾರ. ಈ ಕವಿ ಸಂಗೀತ ಕಲೆಯಲ್ಲಿ ಪಳಗಿರಬಹುದಾದ ಕಾರಣದಿಂದಲೋ ಏನೋ, ಲಕ್ಷ್ಮೀ ರಮಣನು ವೀಣೆಯಿಂದ ಗಾನ ನುಡಿಸಿದಂತೆ ತನ್ನಿಂದ ಕಾವ್ಯ ರಚಿಸಲು ಪ್ರೇರಕಶಕ್ತಿಯಾಗಿರುವನೆಂದಿದ್ದಾನೆ. ಈ ಹಿನ್ನೆಲೆಯಲ್ಲಿ ಲಕ್ಷ್ಮೀಶನ ಜೈಮಿನಿ ಭಾರತವನ್ನು ಪಂಡಿತಕಾವ್ಯವೆಂದು ಪರಿಗಣಿಸಿ ಅದನ್ನು ಓದುವವರೂ, ವ್ಯಾಖ್ಯಾನಿಸುವವರು ಪಂಡಿತರೇ ಆಗಿರಬೇಕೆಂದು ತಮಗೆ ತಾವೇ ಪ್ರಶಸ್ತಿ ಕೊಟ್ಟುಕೊಂಡು ಸಂತೋಷದಿಂದಲೇ ಜನದ ಮುಂದೆ ವಾಚಿಸಿಕೊಂಡು ಬಂದಿರುತ್ತಾರೆ. ಅಲ್ಲದೆ ಈ ಕಾವ್ಯ ಕಳೆದ ಶತಮಾನದಲ್ಲೇ ಜರ್ಮನ್ ಮತ್ತು ಇಂಗ್ಲಿಷಿಗೂ ಭಾಷಾಂತರವಾಗಿರುತ್ತದೆ.

ಹದಿನಾರನೆಯ ಶತಮಾನದಲ್ಲಿ ಪಾಂಡಿತ್ಯ ಪ್ರಧಾನ ಕಾವ್ಯಗಳು ಕನ್ನಡದಲ್ಲಲ್ಲದೆ ಇತರ ಭಾಷೆಗಳಲ್ಲೂ ಬಂದದ್ದುಂಟು. ದೈವ ಪಾರಮ್ಯವನ್ನೂ ಒಳಗೊಂಡ ಮಹಾತ್ಮೆಯ ಕೃತಿಗಳೊಂದಿಗೆ ಶ್ಲೇಷೆ, ಒಗಟು, ಒಡಪಿನ ಪದ್ಯಗಳ ಮಾದರಿಗಳು ರಚನೆಗೊಂಡು ಒಂದು ರೀತಿಯಲ್ಲಿ ಜನಗಳಿಗೆ ಅವು ಮನರಂಜನೆಯನ್ನು ಒದಗಿಸುತ್ತಿದ್ದವು. ಆದರೆ ಈ ಬಗೆಯ ಒಗಟು, ಶ್ಲೇಷೆಯ ಕಾವ್ಯಗಳು ಕವಿಯ ಚಾತುರ್ಯ ಮತ್ತು ಪದಪಾಂಡಿತ್ಯವೇ ಹೊರತು ಕಾವ್ಯದ ಘನತೆ ಮತ್ತು ಜೀವನ ಸಂಬಂಧಿ ಅರ್ಥವಂತಿಕೆಯನ್ನು ಹೆಚ್ಚಿಸುವುದರ ದ್ಯೋತಕವಾಗುವುದಿಲ್ಲ. ಜೈಮಿನಿ ಭಾರತದಲ್ಲಿ ಶ್ಲೇಷೆ, ಪದಪಾಂಡಿತ್ಯ ಮತ್ತು ಅದ್ಭುತ ರಮ್ಯವೆನಿಸುವ ಕಥನ ಮಾದರಿಗಳಿದ್ದರೂ ಕೃಷ್ಣಭಕ್ತಿ, ಕೆಲವು ಕಥೆಗಳ ಜೀವನ ಸಂಬಂಧಿ ನೈಜತೆ, ವೈವಿಧ್ಯಮಯ ಪಾತ್ರಗಳು ಓದುಗರ, ಕೇಳುಗರ ಅಂತರಂಗ